ಹುದ್ದೆಗಳು ಖಾಲಿ ಇದ್ದಂತಹ ಸಂದರ್ಭದಲ್ಲಿ ಮಾತ್ರ ಅವರು ನೇರವಾಗಿ ನೇಮಕಾತಿ ಆಜ್ಞೆಯನ್ನು ಕೊಟ್ಟಂತಹ ಉದಾಹರಣೆಗಳು ನನ್ನ ಮುಂದೆ ಇವೆ. ಅದರ ಪಟ್ಟಿಯೇ ಇದೆ. ಅದನ್ನು ಕೆಲವರು ನಿರಾಕರಿಸಿದರು. ಎಲ್ಲರೂ ಬಿಟ್ಟು ಖಾಲಿ ಇದ್ದಂತಹ ಹುದ್ದೆಗಳಿಗೆ ಮಾತ್ರ ಎಸ್‌ಸಿ:ಎಸ್‌ಟಿ ವಿದ್ಯಾರ್ಥಿಗಳನ್ನು ನೇಮಕ ಮಾಡತಕ್ಕಂಥ ಪ್ರವೃತ್ತಿಯನ್ನು ಸರ್ಕಾರ ಬೆಳಿಸಿಕೊಂಡಿದೆ. 1984ನೇ ಇಸವಿಯಿಂದ ಇವತ್ತಿನವರೆಗೂ ಕೂಡ ನೇರ ನೇಮಕಾತಿ ಆಗಲಿಲ್ಲ. ಏಕೆ ಸರ್ಕಾರ ಅದನ್ನು ಕಡೆಗಣಿಸುತ್ತಿದೆ. ಎಲ್ಲಾ ಸರ್ಕಾರಗಳು ಎಸ್‌ಸಿ:ಎಸ್‌ಟಿ ಬಗ್ಗೆ ಹರಿಜನ ಗಿರಿಜನರ ಬಗ್ಗೆ ಬಹಳಷ್ಟು ಕಾರ್ಯಕ್ರಮಗಳನ್ನು ಹಾಕಿದ್ದೇವೆ ಎಂದು ಹೇಳಿದಂತಹವರು ಸರ್ಕಾರ ತಾನೇ ಮಾಡಿದಂತಹ ಕಾನೂನನ್ನು ಏಕೆ ಜಾರಿ ಮಾಡುತ್ತಿಲ್ಲ ಎನ್ನುವುದಕ್ಕೆ ಸ್ಪಷ್ಟವಾದ ಉತ್ತರ ಕೊಡಬೇಕು. ಮತ್ತೆ ಇದರ ಬಗ್ಗೆ ತಕ್ಷಣ ಕಾರ್ಯಕ್ರಮವನ್ನು ರೂಪಿಸಿ ನೇರ ನೇಮಕಾತಿಯ ಕಾನೂನು ಏನು ಇದೆ ಅದರ ಪ್ರಕಾರ ಅತಿ ಹೆಚ್ಚಿನ ಅಂಕಗಳನ್ನು ಪಡೆದ ಪಾಸಾದಂಥ ವಿದ್ಯಾರ್ಥಿಗಳಿಗೆ ತಕ್ಷಣ ಸರ್ಕಾರದ ಅರ್ಹತೆಗೆ ತಕ್ಕಹಾಗೆ ಉನ್ನತ ಹುದ್ದೆಗಳಿಗೆ ನೇಮಕಾತಿ ಮಾಡಲಿಕ್ಕೆ ಸರ್ಕಾರಕ್ಕೆ ಇರತಕ್ಕಂಥ ತೊಂದರೆ ಏನಿದೆ ಎಂಬುದನ್ನು ಸರ್ಕಾರ ಹೇಳಬೇಕೆಂದು ತಮ್ಮ ಮುಖಾಂತರ ಕೇಳುತ್ತಿದ್ದೇನೆ.

+ಶ್ರೀ ಎಂ.ಸಿ.ನಾಣಯ್ಯ:- ಮಾನ್ಯ ಜಿ.ವಿ.ಶ್ರೀರಾಂರೆಡ್ಡಿಯವರು ಎತ್ತಿರುವ ವಿಷಯಕ್ಕೆ ಉತ್ತರವನ್ನು ನಾಳೆ ಕೊಡುತ್ತೇನೆ ಅಧ್ಯಕ್ಷರೆ.

ವಿಷಯ:- ಸದಸ್ಯರಾದ ಸಭಾಪತಿ ಮತ್ತು ಶ್ರೀ ಜಯರಾಮ ಶೆಟ್ಟಿಯವರ ಬಂಧನಕ್ಕೆ ಜಾಮೀನು ರಹಿತ ವಾರೆಂಟ್.

ಶ್ರೀ ಯು.ಆರ್.ಸಭಾಪತಿ (ಉಡುಪಿ):- ಸನ್ಮಾನ್ಯ ಸಭಾಧ್ಯಕ್ಷರೆ, ಪತ್ರಿಕೆಯಲ್ಲಿ ಸಭಾಪತಿ, ಜಯರಾಮಶೆಟ್ಟಿ ಬಂಧನಕ್ಕೆ ಜಾಮೀನು ರಹಿತ ವಾರೆಂಟ್ ಎಂದು ಬಂದಿದೆ. ಕಳೆದ ಸೆಪ್ಟೆಂಬರ್ ತಿಂಗಳಿನಲ್ಲಿ ಕಂದಾಯ ಇಲಾಖೆಯ ನೌಕರರು ನಮ್ಮನ್ನು ಕೂಡಿ ಹಾಕಿ ಅಸಿಸ್ಟೆಂಟ್ ಕಮಿಷನರ್‌ರವರು ಬರುತ್ತಿದ್ದಾರೆ ಬರುತ್ತಿದ್ದಾರೆ ಎಂದು ಹೇಳಿ ರಾತ್ರಿ 11 ಗಂಟೆಯವರೆಗೆ ಕೂರಿಸಿ ಕಡೆಗೆ ಅವರು ಬಾರದೇ ಇದ್ದುದರಿಂದ ನಾವು ವಾಪಸ್ಸು ತೆರಳಿದ ಮೂರನೆಯ ದಿವಸ ನಾವೇ ಕಂದಾಯ ಇಲಾಖೆಯ ನೌಕರರನ್ನು ಕೂರಿಸಿ ಹಾಕಿದ್ದೇವೆ ಎಂಬ ವಿಚಾರವನ್ನು ಮುಂದಿಟ್ಟುಕೊಂಡು ಐದು ದಿನಗಳವರೆಗೆ ಅವರು ಮುಷ್ಕರ ಮಾಡಿದರು. ಆಮೇಲೆ ಸರ್ಕಾರದ ಗಮನಕ್ಕೆ ಈ ವಿಚಾರ ಬಂದಾಗ ಮಾನ್ಯ ಕಂದಾಯ ಸಚಿವರು ಏನು ಹೇಳಿದರು ಎಂದರೆ ಡಿವಿಜನಲ್ ಕಮಿಷನರ್‌ರವರಿಂದ ಈ ವಿಚಾರವನ್ನು ತನಿಖೆ ಮಾಡಿಸಿ ವರದಿ ಬಂದ ಮೇಲೆ ಯಾರು ತಪ್ಪು ಮಾಡಿದ್ದಾರೆ ಅವರ ಮೇಲೆ ಕ್ರಮ ಕೈಗೊಳ್ಳಲಾಗುವುದು ಎಂದು ಹೇಳಿದ್ದಾರೆ. ಆದರೆ ಕಂದಾಯ ಸಚಿವರು ಈವರೆಗೆ ಡಿವಿಜನಲ್ ಕಮಿಷನರ್‌ರವರಿಂದ ತನಿಖೆಯನ್ನು ಮಾಡಿಸಿಲ್ಲ. ಯಾವುದೋ ಒಂದು ದಿವಸ ನಮಗೆ ಇಂಟಿಮೇಷನ್ ಬಂತು, ಕುಂದಾಪುರದಲ್ಲಿ ಡಿವಿಜನಲ್ ಕಮಿಷನರ್ ಬರುತ್ತಾರೆ ನಾವಿಬ್ಬರು ಬರಬೇಕು ಎಂದು ಹೇಳುವಂಥ ಮಾತನ್ನು ಹೇಳಿದರು. ಕಡೆಗೆ ಆ

ದಿವಸ ಆ ಡಿವಿಜನಲ್ ಕಮೀಷನರ್‌ರವರು ವರ್ಗಾವಣೆ ಹೊಂದಿದ್ದಾರೆ ಎಂದು ಮುಂದಕ್ಕೆ ಹೋಗಿದೆ. ಈಗ ನಮ್ಮ ವಿರುದ್ಧ 143, 147, 341, 342, 353, 504, 506, 384, 149ನೇ ಕಾಲಂಗಳ ಅನ್ವಯದಲ್ಲಿ ಆರೋಪ ಪಟ್ಟಿಯನ್ನು ತಯಾರು ಮಾಡಿ ಕ್ರಿಮಿನಲ್ ಮೊಕದ್ದಮೆಯನ್ನು ದಾಖಲೆ ಮಾಡಿ, ಆಮೇಲೆ ನಮಗೆ ಸಮನ್ಸ್ ನೀಡದೆ ನಾವು ಪರಾರಿಯಾಗಿದ್ದೇವೆ ಎಂದು ಹೇಳಿಬಿಟ್ಟು ಇವ್ಹೊತ್ತು ಜಾಮೀನುರಹಿತ ವಾರೆಂಟ್ ಇಷ್ಯೂ ಮಾಡಿದ್ದಾರೆ ಎಂದು ಆದರೆ ನಮ್ಮ ಸದನದ ಗೌರವ ಏನು ಬಂತು? ನೀವು ನಮಗೆ ರಕ್ಷಣೆಯನ್ನು ಕೊಡುತ್ತೇವೆ ಎಂದು ಹೇಳಿದ್ದೀರಿ, ಸರ್ಕಾರ ತನಿಖೆ ಮಾಡಿಸುತ್ತೇವೆ ಎಂದು ಹೇಳಿದ್ದಾರೆ ಅದನ್ನೂ ಮಾಡದೆ ಇವ್ಹೊತ್ತು ನಾವು ಪರಾರಿ ಅಂದರೆ, ನಾವು ಎಂ.ಎಲ್.ಎ.ಗಳು ಪರಾರಿಯಾಗುವುದಕ್ಕೆ ಸಾಧ್ಯ ಇದೆಯೇ? ಇದನ್ನು ಸ್ಪಷ್ಟಪಡಿಸಿ, ಇದರಿಂದಾಗಿ ಸದನದ ಹಕ್ಕುಚ್ಯುತಿಯಾಗಿದೆ, ಇದರ ಬಗ್ಗೆ ಯಾರು ಕೋರ್ಟಿನಲ್ಲಿ ಈ ರೀತಿಯ ಸಮನ್ಸ್ ನೀಡದೆ ನಾವು ಪರಾರಿಯಾಗಿದ್ದೇವೆ ಎನ್ನುವಂಥ ಹೇಳಿಕೆಯನ್ನು ಕೊಟ್ಟುಬಿಟ್ಟು ನಮಗೆ ಜಾಮೀನು ರಹಿತ ವಾರೆಂಟ್ ಇಷ್ಯೂ ಮಾಡುವಂಥ ಹೊಣೆ ಹೊತ್ತಂಥ ಅಧಿಕಾರಿಗಳ ವಿರುದ್ಧ ಹಕ್ಕುಚ್ಯುತಿಯನ್ನು ತರಬಯಸುತ್ತೇನೆ. ಈ ಬಗ್ಗೆ ಸರ್ಕಾರ ಸ್ಪಷ್ಟೀಕರಣವನ್ನು ಕೊಡಬೇಕೆಂದು ಕೇಳಬಯಸುತ್ತೇನೆ.

+ಶ್ರೀ ಐ.ಎಂ.ಜಯರಾಮ ಶೆಟ್ಟಿ (ಬೈಂದೂರು):- ಮಾನ್ಯ ಅಧ್ಯಕ್ಷರೆ, ಇವ್ಹೊತ್ತು ಬೈಂದೂರು ಕ್ಷೇತ್ರದ ಶಾಸಕನಾಗಿ ಏನೂ ಕೆಲಸ ಮಾಡದೆ ಇರುವಂಥ ಪರಿಸ್ಥಿತಿ ನನಗೆ ಉದ್ಭವಿಸಿದೆ. ಮುಖ್ಯವಾಗಿ ಅಲ್ಲಿ ಯಾವುದು ಎಂದು ನೋಡಿದರೆ ಒಂದು ಮಾನವ ಮೌಲ್ಯವನ್ನೇ ಕಳೆದುಕೊಂಡು ರಾಜಕಾರಣಿಗಳು ಮತ್ತು ಅಧಿಕಾರಿಗಳು ಒಟ್ಟಾಗಿ ಒಂದು ಬಡ ಹೆಂಗಸಿನ ಮನೆಯನ್ನು ಕೆಡವಿದ್ದಾರೆ, ಪಾತ್ರೆ ಸಮೇತ ತೆಗೆದುಕೊಂಡು ಹೋಗಿದ್ದಾರೆ, ಒಂದೂವರೆ ದಿವಸದಿಂದ ಊಟಕ್ಕಿಲ್ಲದೆ, ಬಟ್ಟೆ ಇಲ್ಲದೆ ನನ್ನ ಮನೆಗೆ ಬಂದಾಗ ಅವರು ಯಾವ ಪಕ್ಷವೋ ಯಾವ ಜಾತಿಯೋ ಏನೂ ಗೊತ್ತಿಲ್ಲದೆ ನಾನು ಅವರಿಗೆ ಸಹಾಯವನ್ನು ಮಾಡಲಿಕ್ಕೆ ಹೋದಾಗ ಆ ಅಧಿಕಾರಿಯೊಡನೆ ನಾನು ಕೇಳಿದ ಒಂದು ಕೆಟ್ಟ ಶಬ್ದ ಅಂದರೆ ಅವರಿಗೆ ನೋವಾಗುವಂತದ್ದು. ನಮಗೂ ನಿಮಗೂ ದೇವರು ಊಟ ಮತ್ತು ಹಾಕಲಿಕ್ಕೆ ಬಟ್ಟೆ ಕೊಟ್ಟಿದ್ದಾನೆ. ಆ ಬಡ ಹೆಂಗಸಿಗೆ ಬಟ್ಟೆ ಇಲ್ಲ, ಒಂದೂವರೆ ದಿವಸದಿಂದ ಊಟಕ್ಕಿಲ್ಲ. ಅವರು ಈ ತರಹ ಇದ್ದಾರೆ. ಇದರ ಬಗ್ಗೆ ನನಗೆ ನೋವಾದಂಥ ಮಾತು ಬಿಟ್ಟರೆ ಬೇರೆ ಯಾವುದು ಒಂದು, ಶಬ್ದವನ್ನೂ ನಾನು ಉಪಯೋಗಿಸಿಲ್ಲ. ಆದರೆ ಇವರು ಇಷ್ಟೊಂದು ಸೆಕ್ಷನ್‌ಗಳನ್ನು ನನ್ನ ಮೇಲೆ ಹಾಕಿದ್ದಾರೆ. ಅವರಿಗೆ ನಾನು ಒಂದು ಕೆಟ್ಟ ಶಬ್ದ ಆಗಲೀ ಅಥವಾ ದುರಹಂಕಾರದಿಂದ ಆಗಲೀ, ದುರ್ನಡೆತೆಯಿಂದ ಆಗಲೀ ಅಧಿಕಾರಿಗಳೊಂದಿಗೆ ನಾನು ಮಾತನಾಡಲಿಲ್ಲ. ಈವತ್ತು ಎಲ್ಲವನ್ನು ದೇವರು ನೋಡುತ್ತಾನೆ ಎಂದು ತಿಳಿದುಕೊಂಡಿದ್ದೇನೆ. ನಾನು ಪೂಜಿಸುವಂತದ್ದು ಕೊಲ್ಲೂರು ಮೂಕಾಂಬಿಕ ಅಲ್ಲಿಯೂ ಸಹ ಅವ್ಯವಹಾರ, ಅಲ್ಲಿ ಹೋಗಿ ದೇವರ ಹತ್ತಿರವೂ ಕೇಳುವ ಹಾಗಿಲ್ಲ. ಇಲ್ಲಿ ಬಂದರೆ ತಾವು ನನಗೆ ರಕ್ಷಣೆಯನ್ನು ಕೊಡುತ್ತೀರಿ ಎಂದು ತಮ್ಮ ಬಳಿ ಎರಡು ಸಾರಿ ಬಂದೆ ತಾವು ಸಹ ರಕ್ಷಣೆಯನ್ನು

ಕೊಡಲಿಲ್ಲ. ಇವೊತ್ತು ಅಲ್ಲಿ ಆಗುವಂಥ ಪ್ರತಿಯೊಂದನ್ನು ಹೇಳುವುದಕ್ಕೆ ಹೋದರೆ ನಾವು ಶಾಸಕರಾಗಿ, ನಮ್ಮ ಮನೆಯದಲ್ಲಿ ದನ ಮೇಯಿಸುವವನಿಗಾದರೂ ಅವನ ಹತ್ತಿರ ಸ್ವಲ್ಪಮಟ್ಟಿಗಾದರೂ ನಿಯತ್ತಿದೆ, ಧರ್ಮ ಇದೆ. ನಾವು ಇವೊತ್ತು ಎಜ್ಯುಕೇಟೆಡ್ ಕ್ಲಾಸ್ ಎಂದು ಹೇಳುತ್ತೇವೆ. ಅಲ್ಲಿ politicians are the scoundrels of the last order. ಇದು ನಮ್ಮ ಎಜ್ಯುಕೇಷನ್ ಸೊಸೈಟಿಯಲ್ಲಿ. ಹಳ್ಳಿಗೆ ಹೋದರೆ, ನಾನೇನಾದರೂ ಜನಸೇವೆ ಮಾಡಬೇಕೆಂದರೆ, ಈ ರಾಜಕಾರಣಿಗಳು ಈ ಅಧಿಕಾರಿಗಳ ಮಧ್ಯದಲ್ಲಿ ಜನಸೇವೆಯನ್ನು ಮಾಡುವುದಕ್ಕೂ ಆಗುವುದಿಲ್ಲ, ಜನತೆಗೆ ನ್ಯಾಯವನ್ನು ಒದಗಿಸಲಿಕ್ಕೆ ಆಗುವುದಿಲ್ಲ. ನಿಜವಾಗಿಯೂ ನಾನು ಹೇಳಬೇಕಾದರೆ, ನನ್ನ ಗ್ರಾಮೀಣ ಪ್ರದೇಶದಲ್ಲಿ ಒಂದು ಸಣ್ಣ ಮಕ್ಕಳ ಶಾಲೆ ಇದೆ ಅದರಲ್ಲಿ ಸುಮಾರು 200-300 ಮಕ್ಕಳಿದ್ದಾರೆ ಒಬ್ಬ ಉಪಾಧ್ಯಾಯರು ಕೂಡ ಇಲ್ಲ. ಅಲ್ಲಿ ಹೋಗಲಿಕ್ಕೆ ಜನರಿಗೆ ರಸ್ತೆ ಇಲ್ಲ, ಅಲ್ಲಿಗೆ ಸರ್ಕಾರದಿಂದ ಆಗುವಂಥ ಯೋಜನೆಗಳು ಹತ್ತು ಪರ್ಸೆಂಟ್ ಕೂಡ ಮುಟ್ಟುವುದಿಲ್ಲ. ಇದನ್ನು ನಾನು ಅಧಿಕಾರಿಗಳೊಡನೆ ಕೇಳಿದರೆ ನಮ್ಮ ಮೇಲೆ ಈ ತರಹ ಕೇಸು. ದಯಮಾಡಿ ನಾನು ಹೇಳುತ್ತೇನೆ, ಇದರಲ್ಲಿ ನಾನು ಶಾಸಕನಾಗಿ ಅಥವಾ ಈ ಸಂದರ್ಭದಲ್ಲಿ ತಮ್ಮೊಡನೆ ಒಂದು ದುರ್ನಡತೆಯಿಂದ ಅಥವಾ ಒಂದು ಕಾನೂನಿಗೆ ವಿರುದ್ಧವಾಗಿ ಒಂದು ಪರ್ಸೆಂಟ್ ನಡೆದುಕೊಂಡಿದ್ದರೆ ನೀವು ಯಾವ ಶಿಕ್ಷೆಯನ್ನು ಕೊಡಿ ನಾನು ಅದಕ್ಕೆ ತಯಾರಿದ್ದೇನೆ. ಆದರೆ ಈ ತರಹವಾಗಿ ರಾಜಕಾರಣಿಗಳನ್ನು ಅಧಿಕಾರಿಗಳನ್ನು ಇವರು ತಿಳಿದವರು ಉಪಯೋಗಿಸಿಕೊಂಡು ನಿಜವಾಗಿ ಒಂದು ರೀತಿಯ ಮಾನಸಿಕ ವೇದನೆಯನ್ನು ಕಲ್ಪಿಸುತ್ತಿದ್ದಾರೆ. ಇದರಲ್ಲಿ ತಾವು ಮಧ್ಯಪ್ರವೇಶಿಸಿ, ನಾವು ಅಧಿಕಾರಿಗಳನ್ನು ಒಂದು ಕೆಟ್ಟ ಮನೋಭಾವದಿಂದ ನೋಡಿಲ್ಲ. ನನಗೇನು ಬೇಸರ ಆಗುತ್ತದೆ ಎಂದರೆ ಆ ಬಡ ಹೆಂಗಸು ನನ್ನ ಮನೆಗೆ ಮಾನವೀಯತೆಯ ದೃಷ್ಟಿಯಿಂದ ಬಂದಿದ್ದಾರೆ. ನನ್ನ ಮನೆಗೆ ಕೊಂಕಣ ರೈಲ್ವೆಮಾರ್ಗದಲ್ಲಿ ಅವರು ನಡೆದುಕೊಂಡು ಬಂದವರು. ಸಾಧಾರಣ ಮೂರು ಕಿಲೋಮೀಟರ್ ದೂರದಿಂದ ನನ್ನನ್ನು ನೋಡಬೇಕೆಂದು ಅಲ್ಲಿಂದ ಬಂದಿದ್ದಾರೆ. ಅವರ ಮೇಲೂ ಕೇಸನ್ನು ಹಾಕಿದ್ದಾರೆ. ನನ್ನದೇನೊ ಬಿಡಿ ಮಾಡಿದ್ದನ್ನು ಅನುಭವಿಸುತ್ತೇನೆ, ನಾನು ಆತ್ಮ ಮತ್ತು ದೇವರಲ್ಲಿ ನಂಬಿಕೆ ಇರತಕ್ಕಂಥ ಮನುಷ್ಯ. ಆದರೆ ಇವೊತ್ತು ನನ್ನ ಕ್ಷೇತ್ರದಲ್ಲಿ ನಾನು ಯಾವ ತರಹದಲ್ಲಿ ಕೆಲಸವನ್ನು ಮಾಡಲಿಕ್ಕೆ ಆಗುತ್ತಾ ಇಲ್ಲ.

ಅಧ್ಯಕ್ಷರೆ, ಒಂದು ನೀರಾವರಿಯ ಬಗ್ಗೆ ತಮಗೆ ಹೇಳುತ್ತೇನೆ. 8 ಲಕ್ಷ, 10 ಲಕ್ಷ ಖರ್ಚಾಗುತ್ತದೆ, ಹತ್ತು ಎಕರೆ ಜಮೀನಿಗೆ ನೀರಿಲ್ಲ. ವಾಟರ್ ಬೋರ್ಡ್ ಸ್ಕೀಂನಲ್ಲಿ 70-80 ಲಕ್ಷ ಖರ್ಚುಮಾಡಿ 70 ಲೀಟರ್ ನೀರು ಬರುವುದಿಲ್ಲ. ಇದನ್ನೆಲ್ಲಾ ನೋಡುವಾಗ ನಮಗೆ ಅಲ್ಲಿ ಕೆಲಸ ಮಾಡುವುದಕ್ಕೂ ಸಾಧ್ಯವಿಲ್ಲ, ಇದನ್ನು ಕೇಳುವುದಕ್ಕೂ ಸಾಧ್ಯವಿಲ್ಲ, ಇದಕ್ಕೆ ಎಲ್ಲಿ ದಾರಿ ಎಂದು ನಮಗೇ ಗೊತ್ತಾಗುತ್ತಾ ಇಲ್ಲ. ಏಕೆಂದರೆ ನಾನೂ ಸಹ ಸದನದ ಒಬ್ಬ ಸದಸ್ಯ, ಇದರಲ್ಲಿ ನಾನೇನಾದರೂ ತಪ್ಪಿತಸ್ಥೆಂದು ಕಂಡುಬಂದರೆ ಇದರ ಹತ್ತು ಪಾಲಷ್ಟು ಶಿಕ್ಷೆಯನ್ನು ಕೊಡಿ, ಗಲ್ಲಿಗೇರಿಸಿ ಅದಕ್ಕೆ ನಾನು ತಯಾರಿದ್ದೇನೆ.

ಇದು ಏನೂ ಇಲ್ಲದೆ ರಾಜಕೀಯವಾಗಿ ಬೆಳೆಸುವಂತದ್ದಾಗಿದೆ. ಹಾಗಾದರೆ ಇವೊತ್ತು ನಾವು ರಾಜಕೀಯದಲ್ಲಿ ಇರಬಾರದೇ ಅಥವಾ ಸೇವೆ ಮಾಡುವಂಥ ಮನೋಭಾವವೆ ಇರಬಾರದೇ? ಇದು ಮಾನವೀಯತೆಯ ದೃಷ್ಟಿಯಿಂದ. ಇದು ನನ್ನ ರಾಜಕಾರಣದ ಹಿತದೃಷ್ಟಿಯಿಂದಲ್ಲ ಅಥವಾ ರಾಜಕೀಯದ ಲಾಭ ಮಾಡುತ್ತಿಲ್ಲ. ಒಂದು ಬಡ ಹೆಂಗಸಿಗೆ, ನಾನು ಅಧಿಕಾರಿಗಳೊಡನೆ ಕೇಳಿದೆ ಆ 127: 1ಎ ಮನೆ ಎಂದು ಹೇಳಿದರು, ಆ ಮನೆ ತೋರಿಸಿ, ಅಲ್ಲೇ ಆ ಪಂಚಾಯಿತಿಯಲ್ಲಿ ಇದ್ದರು ಆ ಮನೆಯನ್ನು ತೋರಿಸಲಿಕ್ಕೆ ಆಗಲಿಲ್ಲ. ಪಂಚಾಯಿತಿಯಲ್ಲಿ ರೆಸಲ್ಯೂಷನ್ ಆಗಿದೆ ಎಂದು ಹೇಳುತ್ತೀರಿ, ಅದನ್ನು ತೋರಿಸಲಿಕ್ಕೆ ಆಗಲ್ಲ. ಅವರಿಗೆ ನೀವು ಯಾವ ತರಹದಲ್ಲಿ ಹಸಿರುಕಾರ್ಡನ್ನು ಕೊಟ್ಟಿರಿ ಇದನ್ನೆಲ್ಲಾ ನಾನು ಅವರ ಹತ್ತಿರ ಕೇಳಿದಾಗ, ತಹಸೀಲ್ದಾರರು ಬರುತ್ತಾರೆ, ಎ.ಸಿ. ಯವರು ಬರುತ್ತಾರೆ.....

+ಅಧ್ಯಕ್ಷರು:- ಜಯರಾಮ ಶೆಟ್ಟರೆ, ನನಗೆ ತಮ್ಮ ನೋವು ಅರ್ಥವಾಗುತ್ತದೆ. ನಿಮ್ಮ ಸ್ವಭಾವ ನನಗೆ ಗೊತ್ತಿದೆ, ನೀವು ಎಷ್ಟು ಆವೇಶಕ್ಕೆ ಒಳಗಾಗಿದ್ದೀರಿ ಎಂಬುದು ಗೊತ್ತಾಗಿದೆ. ದಯಮಾಡಿ ಮನಸ್ಸಿಗೆ ಬೇಸರ ಮಾಡಿಕೊಳ್ಳಬೇಡಿ. ನಾಣಯ್ಯನವರೇ, ಜಾಲಪ್ಪನವರು ಕಂದಾಯ ಸಚಿವರಾಗಿದ್ದಾಗ ಈ ವಿಷಯ ಸದನದಲ್ಲಿ ಪ್ರಸ್ತಾಪವಾಗಿತ್ತು. ಯಾವುದೋ ಒಂದು ಹೆಣ್ಣು ಮಗಳಿಗೆ ಎವಿಕ್ಷನ್ ಆರ್ಡರ್ ಕೊಟ್ಟಿದ್ದ ವಿಚಾರದಲ್ಲಿ, ಅದು ಅವರ ಕ್ಷೇತ್ರಕ್ಕೆ ಬರುತ್ತದೆ, ಏಕೆ ಆ ಬಡ ಹೆಣ್ಣುಮಗಳಿಗೆ ತೊಂದರೆ ಕೊಡುತ್ತೀರಿ ಎಂದು ಕೇಳುವುದಕ್ಕೆ ಅವರು ಹೋಗಿದ್ದರು. ಆಕಸ್ಮಿಕವಾಗಿ ಸಭಾಪತಿಯವರು ಅಲ್ಲಿದ್ದಂತಹವರೂ ಸಹ ಶಾಸಕರು ಏನೊ ಒಂದು ಸನ್ನಿವೇಶದಲ್ಲಿ ಇದ್ದಾರೆ ಎಂದು ಅವರು ಅವರ ನೆರವಿಗೆ ಬಂದರು. ನಾನು ಆಗ ಕಂದಾಯ ಸಚಿವರ ಹತ್ತಿರ ಕೂಡ ಮಾತನಾಡಿದ್ದೆ, ಅವರು ಇಡೀ ಇಲಾಖೆ ಒಟ್ಟಾಗಿ ಸಂಘ ಇದೆ. ಸಂಘದ ವತಿಯಿಂದ ಇವರು ಅವರನ್ನು ಕರ್ತವ್ಯ ಚಲಾಯಿಸುವಂತೆ ಮಾಡಿದ್ದಾರೆ ಎಂದು ಹೇಳಿ ಇವರ ಮೇಲೆ ದೂರನ್ನು ಕೊಟ್ಟು ಇವೊತ್ತು ಇಲ್ಲಿಗೆ ತಂದು ತಲುಪಿಸಿದ್ದಾರೆ. ಪತ್ರಿಕೆ ಮೇಲೆ ಅವರು ಹಕ್ಕುಚ್ಯುತಿ ಕೊಡುತ್ತೇವೆ ಎಂದು ಹೇಳಿದ್ದಾರೆ ದಯಮಾಡಿ ಕಳುಹಿಸಿಕೊಡಿ. ಪತ್ರಿಕೆಗೆ ಯಾವ ಮೂಲದಿಂದ ವರ್ತಮಾನ ಬಂತು ಎಂದು ಅವರು ಹೇಳುತ್ತಾರೆ. ಆಮೇಲೆ ಆ ಮೂಲದ ಮೇಲೆ ನಾವು ಹೋಗುವುದಾಗುತ್ತದೆ. ವಾರೆಂಟ್ ಅದೆಲ್ಲಾ ಕೋರ್ಟಿಗೆ ಸಂಬಂಧಿಸಿದ್ದು, ಒಂದು ಕೇಸ್ ದಾಖಲು ಮಾಡಿ ಕೋರ್ಟಿಗೆ ವರ್ತಮಾನ ಕಳುಹಿಸಿದ ಮೇಲೆ ಚಾರ್ಜ್‌ಷೀಟ್ ಫೈಲ್ ಮಾಡಿದಮೇಲೆ ವಾರೆಂಟ್ ಕಳುಹಿಸತಕ್ಕಂಥದ್ದು, ಅದು ಏತಕ್ಕೆ ತಲುಪಲಿಲ್ಲ ಏನು ಎಂಬತಕ್ಕಂಥದ್ದು ಅದು ಕೋರ್ಟಿಗೆ ಸಂಬಂಧಿಸಿದ ವಿಚಾರಣೆಯಾಗುತ್ತದೆ. ಆದರೆ ನಾನು ತಮ್ಮಲ್ಲಿ ಏನು ವಿನಂತಿ ಮಾಡಿಕೊಳ್ಳುತ್ತೇನೆ ಸಭಾಪತಿಯವರಾದರೂ ಸ್ವಲ್ಪ ಜೋರಾಗಿ ಗಟ್ಟಿಯಾಗಿ ಮಾತನಾಡಿದರು, ನಮಗೆಲ್ಲರಿಗೂ ಈ ಹದಿನೆಂಟು ತಿಂಗಳ ಪರಿಚಯದಲ್ಲಿ ಗೊತ್ತಿದ್ದಂತೆ ಜಯರಾಮಶೆಟ್ಟರಂಥ ಸಜ್ಜನರನ್ನು ನಾವು ಇನ್ನೊಬ್ಬರನ್ನು ಹುಡುಕಿ ತರುವುದೇ ಕಷ್ಟವಾಗುತ್ತದೆ. ಅಂತಹ ಮನುಷ್ಯ ಅಷ್ಟು ಉದ್ವೇಗಕ್ಕೆ ಒಳಗಾಗಿ ಬಹುಶಃ ನಾನು

ಅವರನ್ನು ಒಂದು ಸಲ ಮನವೊಲಿಸಿದೆ, ನಾನು ಮೆಂಬರ್ ಆಗುವುದೇ ಇಷ್ಟ ಇಲ್ಲ ನಾನು ಹೊರಟುಹೋಗುತ್ತೇನೆ ಎಂದು ಹೇಳಿದರು. ಒಂದು ನಿಮಿಷ, ಬೆಲ್ಲದ್‌ರವರೇ ನಿಮ್ಮ ಮಾತನ್ನು ನಾನೇ ಹೇಳುತ್ತೇನೆ, ನನಗೆ ಜಯರಾಮಶೆಟ್ಟರು ಪರಿಚಯ ಇಲ್ಲವೇ? ಅವರು ನಮ್ಮ ಸದನದ ಸದಸ್ಯರು. ಅವರ ಪರಿಚಯ ನನಗೆ ಬಹಳ ನಿಕಟವಾಗಿದೆ. I think it is not fair. ಅಲ್ಲಿ ಅಧಿಕಾರಿಗಳು ಎಲ್ಲರೂ ಸೇರಿ ಏನೋ ಒಂದು ರೀತಿಯ ಮುಂದಕ್ಕೆ ಯಾರು ಶಾಸಕರು ಯಾವುದೇ ಒಂದು ಸಂದರ್ಭದಲ್ಲೂ ಕೂಡ ಧ್ವನಿಯನ್ನೇ ಎತ್ತಬಾರದು ಎಂಬ ದೃಷ್ಟಿಯಲ್ಲಿ ಮಾಡಿದಂತೆ ಕಾಣುತ್ತದೆ. How to resolve this? You may please attend to it immediately.

+ಶ್ರೀ ಎಂ.ಸಿ.ನಾಣಯ್ಯ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು):- ಮಾನ್ಯ ಸಭಾಧ್ಯಕ್ಷರೆ, ಮಾನ್ಯ ಜಯರಾಮಶೆಟ್ಟಿಯವರು, ಸಭಾಪತಿಯವರು ಈ ಒಂದು ಕರಕುಂಜೆ ಪ್ರಕರಣದ ಬಗ್ಗೆ ತಾವು ಇಲ್ಲಿ ಎತ್ತಿದ್ದೀರಿ, ಬಹುಶಃ ಸಭಾಪತಿ, ಜಯರಾಮಶೆಟ್ಟಿಯವರ ಬಂಧನಕ್ಕೆ ಜಾಮೀನುರಹಿತ ವಾರೆಂಟ್ ಎಂದು ಹೇಳುತ್ತಾ ಇರತಕ್ಕಂಥದ್ದು ಬಹುಶಃ ಕೋರ್ಟಿನಲ್ಲಿ ಕೇಸು ದಾಖಲೆಯಾಗಿ ಸಮನ್ಸ್‌ನ್ನು ಕೊಡಲಿಕ್ಕೆ ಇರತಕ್ಕಂಥದ್ದು, ವಾರೆಂಟನ್ನು ಕೊಡಲಿಕ್ಕೆ ಇರತಕ್ಕಂಥದ್ದು ಇದು ನ್ಯಾಯಾಲಯದ ಕಾರ್ಯವ್ಯಾಪ್ತಿಗೆ ಸೇರತಕ್ಕಂಥದ್ದು. ಬಹುಶಃ ಅದರ ವಿಚಾರದಲ್ಲಿ ನಾವು ಇವೊತ್ತು ಮಾತನಾಡಲಿಕ್ಕೆ ಆಗುವುದಿಲ್ಲ. ಅದಕ್ಕೆ ಸಂಬಂಧಪಟ್ಟಹಾಗೆ ಕಾನೂನು ಪ್ರಕಾರ ಕ್ರಮವನ್ನು ಕೈಗೊಳ್ಳುತ್ತೇವೆ. ಎರಡನೆಯದಾಗಿ ಈ ಒಂದು ಮೊಕದ್ದಮೆಯನ್ನು ಹೂಡಿರತಕ್ಕಂಥದ್ದಕ್ಕೆ ಸಂಬಂಧವಾಗಿ ತಾವು ತಮ್ಮ ವಿಚಾರವನ್ನು ಹೇಳಿದ್ದೀರಿ, ಈ ಹಿಂದಿನ ಸದನದಲ್ಲಿ ಚರ್ಚೆಯಾಗಿರತಕ್ಕಂಥದ್ದರ ಬಗ್ಗೆ ಕೂಡ ಹೇಳಿದ್ದೀರಿ. ಗೃಹಸಚಿವರು ಇಲ್ಲೇ ಇದ್ದಾರೆ, ಅಧಿಕಾರಿಗಳನ್ನು ಕರೆದು ಚರ್ಚೆ ಮಾಡಿ, ಬಹುಶಃ ಇದರಲ್ಲಿ ಯಾವರೀತಿಯಲ್ಲಿ ಸರ್ಕಾರ ಕ್ರಮವನ್ನು ಕೈಗೊಳ್ಳಬೇಕು ಎಂದು ಹೇಳುವುದನ್ನು ಮತ್ತು ತಾವು ಹೇಳಿರತಕ್ಕ ವಿಚಾರವನ್ನು ಮನಸ್ಸಿನಲ್ಲಿಟ್ಟುಕೊಂಡು, ಶ್ರೀಮಾನ್ ಜಯರಾಮಶೆಟ್ಟಿಯವರು ಹೇಳಿರತಕ್ಕಂಥ ವಿಚಾರವನ್ನು ಮನಸ್ಸಿನಲ್ಲಿಟ್ಟುಕೊಂಡು.....

ಶ್ರೀ ಯು.ಆರ್.ಸಭಾಪತಿ:- ಒಂದು ವಿಚಾರವನ್ನು ತಾವು ನಮಗೆ ಸ್ಪಷ್ಟೀಕರಣ ನೀಡಬೇಕು. ಡಿವಿಜನಲ್ ಕಮೀಷನರ್‌ನಿಂದ ತನಿಖೆ ಮಾಡಿ ಬಂದಮೇಲೆ ಕ್ರಿಮಿನಲ್ ಪ್ರೊಸೀಜರ್ ಮುಂದುವರೆಸುತ್ತೇವೆಂದು ಯಾವಾಗ ನೀವು ಇಲ್ಲಿ ಹೇಳಿದ್ದೀರೋ ಅನಂತರ ಆ ಪೋಲೀಸ್ ಅಧಿಕಾರಿಗಳಿಗೆ ನಮ್ಮ ಮೇಲೆ ಆರೋಪ ಪಟ್ಟಿಯನ್ನು ಮಾಡಲು ಯಾರು ಕಳುಹಿಸಿದ್ದಾರೆ? ಹೊಂ ಮಿನಿಸ್ಟರ್ ಕಳುಹಿಸಿದ್ದಾರೋ? ಅಥವಾ ಹೊಂ ಡಿಪಾರ್ಟ್‌ಮೆಂಟ್‌ಗೆ ನೀವು ಸಂದೇಶವನ್ನು ಕಳುಹಿಸಿಕೊಟ್ಟಿಲ್ಲವೊ, ಎಲ್ಲಿ ಲ್ಯಾಪ್ಸ್ ಆಗಿದೆ ಎಂಬುದನ್ನು ತಾವು ಇಲ್ಲಿ ಸ್ಪಷ್ಟಪಡಿಸಬೇಕು. ಇದು ಶಾಸಕರ ಹಕ್ಕುಚ್ಯುತಿಯಾಗಿದೆ ಎಂದು ಹೇಳಬಯಸುತ್ತೇನೆ. ಯಾವಾಗ ಸದನದಲ್ಲಿ ನಮಗೆ ರಕ್ಷಣೆ ಕೊಡುತ್ತೇವೆಂದು ಹೇಳಿ ಕಂದಾಯಸಚಿವರು ಡಿವಿಜನ್‌ಕಮೀಷನರ್ ಹತ್ತಿರ ತನಿಖೆ ಮಾಡಿಸುತ್ತೇವೆಂದು

ಹೇಳಿಯಾದ ಮೇಲೆ ನಮ್ಮ ಮೇಲೆ ಇತ್ತೀಚೆಗೆ ಲೋಕಸಭೆ ಚುನಾವಣೆಯಾಗುವಾಗ ಈ ಆರೋಪ ಪಟ್ಟಿಯನ್ನು ಸಲ್ಲಿಸಲಾಗಿದೆ. ಇದು ತಮಗೆ ಗೊತ್ತಿದೆಯೇ? ಏಕೆ ಈ ರೀತಿಯಾಗಿ ಮಾಡುತ್ತೀರಿ?

ಶ್ರೀ ಬಿ.ಎಸ್.ಯಡಿಯೂರಪ್ಪ:- ಮಾನ ಅಧ್ಯಕ್ಷರೆ, ಹೀಗಾದರೆ ಶಾಸಕರು ಹೇಗೆ ಗೌರವದಿಂದ ಕೆಲಸವನ್ನು ಮಾಡುವುದು? ನಾವು ಏನು ಹೇಳಬೇಕಾಗುತ್ತೋ ಅದನ್ನು ತಾವು ಹೇಳಿದ್ದೀರಿ. ಮಾನ್ಯ ನಾಣಯ್ಯನವರು ಸಚಿವರಾಗಿ ಅನುಭವಿಸಿರುವಂಥವರು ಇವತ್ತು ಸಂಸದೀಯ ವ್ಯವಹಾರಗಳ ಸಚಿವರಾಗಿ ಅಲ್ಲಿದ್ದಾರೆ. ಈಗ ನಾನು ಹೇಳುವಂಥಾದ್ದು ಈ ಸದನದಲ್ಲೇ ಚರ್ಚೆಯಾಗಿದೆ. ಅಧ್ಯಕ್ಷರೆ, ನಾವು ನಿಮ್ಮ ಮುಂದೆ ನಮ್ಮ ಗೋಳನ್ನು ಹೇಳಿಕೊಂಡಾಗ ಅದನ್ನು ಸಮಗ್ರವಾಗಿ ನೋಡುತ್ತೇನೆಂದು ಹೇಳಿದರು. ಈ ರೀತಿಯಾಗಿ ಮಾನ್ಯ ಸಭಾಪತಿಗಳ ಮತ್ತು ಮಾನ್ಯ ಜಯರಾಮಶೆಟ್ಟಿಯವರ ಬಗ್ಗೆ ಪತ್ರಿಕೆಗಳಲ್ಲಿ ಬಂದರೆ ಶಾಸಕರು ಹೇಗೆ ಕೆಲಸವನ್ನು ಮಾಡುವುದು? ನಾನು ಸೂಕ್ಷ್ಮವಾಗಿ ಹೇಳುತ್ತೇನೆ. ನಾವು ಜನಗಳ ಕೆಲಸವಾಗಬೇಕೆಂದು ಕಳಕಳಿಯಿಂದ ಅಧಿಕಾರಿಗಳ ಜೊತೆಯಲ್ಲಿ ಮಾತನಾಡುವುದನ್ನು ಈ ರೀತಿಯಾಗಿ ತಿರುಚಿ ಯಾರು ಶಾಸಕರು ಧೈರ್ಯವಾಗಿ ಮಾತನಾಡಬಾರದು ನಾವು ಏನು ಬೇಕಾದರೂ ಮಾಡಬಹುದು ಎನ್ನುವ ಪ್ರವೃತ್ತಿ ಅಧಿಕಾರಿಗಳಲ್ಲಿ ಬೆಳೆಯುತ್ತಿದೆ, ಇದನ್ನು ಮೊಟಕು ಮಾಡಿ. ಕೋರ್ಟ್‌ನಲ್ಲಿ ಅವರು ಹೇಗೆ ಫೇಸ್ ಮಾಡುತ್ತಾರೋ ನೋಡೋಣ. ಶಾಸಕರು ಅಂದರೆ ಮೂರು ಕಾಸಿಗೆ ಬೆಲೆ ಇಲ್ಲದಂತಹ ಸ್ಥಿತಿಗೆ ನಿಮ್ಮ ಸರ್ಕಾರ ತರುತ್ತಿದೆ. ಇದು ಸರಿಯಲ್ಲವೆಂದು ಹೇಳಬಯಸುತ್ತೇನೆ.

ಶ್ರೀ ವಾಟಾಳ್ ನಾಗರಾಜ್:- ಮಾನ್ಯ ಅಧ್ಯಕ್ಷರೆ, ತಾಲ್ಲೂಕುಗಳಲ್ಲಿ ಅಧಿಕಾರಿಗಳಿಗೆ ಶಾಸಕರು ಎಂದರೆ ಗೌರವವಿಲ್ಲ. ಕಾರಣವೇನಂದರೆ ಸರ್ಕಾರ ಆ ಅಧಿಕಾರಿಗಳಿಗೆ ಸರಿಯಾದ ಸಂದೇಶವನ್ನು ಕೊಟ್ಟಿಲ್ಲ. ಸರಿಯಾದಂತಹ ಎಚ್ಚರಿಕೆಯನ್ನು ಕೊಟ್ಟಿಲ್ಲ. ಈಗ ಇದರ ಬಗ್ಗೆ ಬೇಡಿಕೆಗಳಲ್ಲಿ ಬರುತ್ತದೆ. ಆಗ ಸಮಗ್ರವಾಗಿ ಚರ್ಚೆಯಾಗಬೇಕಾಗುತ್ತದೆ. ನಾವು ಅನೇಕ ಸಾರಿ ಹೇಳಿದ್ದೇವೆ. ಶಾಸಕರು ಎಂದರೆ ಎಷ್ಟು ಬೇಜವಾಬ್ದಾರಿ ಎಂದರೆ ಅವರು ಬಂದರೆ ಬರುತ್ತಾರೆ, ಹೋದರೆ ಹೋಗುತ್ತಾರೆ. ಅವರ ಮಾತು ಏಕೆ ಕೇಳಬೇಕು ಎಂದು ಇಷ್ಟೊಂದು ಅನಾದರಣೆ ಪ್ರತಿ ಕ್ಷೇತ್ರದಲ್ಲೂ ನಡೆದಿದೆ. ಇದನ್ನು ನಾನು ಪಕ್ಷ ರಹಿತವಾಗಿ ಮಾತನಾಡುತ್ತಿದ್ದೇನೆ. ಎಲ್ಲಾ ಕ್ಷೇತ್ರಗಳಲ್ಲೂ ಶಾಸಕರುಗಳನ್ನು ಸಾಮಾನ್ಯ ಕ್ಷೇತ್ರದ ತಾಲ್ಲೂಕಿನ ಅಧಿಕಾರಿಗಳು ಎಷ್ಟು ಅಸಡ್ಡೆಯಿಂದ ಕಾಣುತ್ತಿದ್ದಾರೆಂದರೆ ನಾವು ಕೆಲಸ ಮಾಡುವುದಕ್ಕೇ ಆಗುತ್ತಾ ಇಲ್ಲ. ಅಂತಹ ಪರಿಸ್ಥಿತಿ ನಿರ್ಮಾಣವಾಗಿದೆ. ಈ ಕ್ಷೇತ್ರದಲ್ಲಿ ಗ್ರಹಣ ಹಿಡಿದಿದೆ. ಇದರ ಬಗ್ಗೆ ಸಮಗ್ರವಾಗಿ ಚರ್ಚೆಯಾಗಬೇಕಾಗಿದೆ.

ಶ್ರೀ ಎಂ.ಸಿ.ನಾಣಯ್ಯ:- ಮಾನ್ಯ ಅಧ್ಯಕ್ಷರೆ, ಅಧಿಕಾರಿಗಳು ಕಾನೂನು ಬಾಹಿರವಾಗಿ ಎಲ್ಲಾದರೂ ವರ್ತನೆ ಮಾಡಿದ್ದರೆ, ಅಂಥವರಿಗೆ ತಮ್ಮ ಸೌಜನ್ಯವನ್ನು ಬದಿಗಿಟ್ಟು ವರ್ತನೆ ಮಾಡುವಂತಹ ಅಧಿಕಾರಿಗಳ ಬಗ್ಗೆ ನಾವು ಕ್ರಮ ಕೈಗೊಳ್ಳಲೇ ಬೇಕಾಗುತ್ತದೆ. ನಾವು ಆ

ಪಕ್ಷದಲ್ಲೇ ಇರಲಿ, ಈ ಪಕ್ಷದಲ್ಲೇ ಇರಲಿ ಅವರು ಶಾಸಕರಿಗೆ ಕೊಡಬೇಕಾದಂಥ ಗೌರವವನ್ನು ಮತ್ತು ಶಾಸಕರು ಹೇಳಿದಂತಹ ಕೆಲಸಗಳನ್ನು ಕಾನೂನು ಬದ್ಧವಾಗಿ ಅಧಿಕಾರಿಗಳು ಮಾಡಲೇಬೇಕಾಗುತ್ತದೆ. ಈಗ ತಾವು ಹೇಳಿದಂತಹ ವಿಚಾರಗಳು ಏನಿವೆ, ಇದು ಹಲವಾರು ಸಂದರ್ಭದಲ್ಲಿ ಮಾಡಿಲ್ಲವೆಂದು ಹೇಳುವುದಕ್ಕೆ ನಾನು ತಯಾರಿಲ್ಲ. ಆಗಿದೆ. ಇದರ ಬಗ್ಗೆ ಸರ್ಕಾರ ಖಂಡಿತವಾಗಿ ಗಮನಹರಿಸುತ್ತದೆಂದು ಹೇಳಿ, ಈಗ ಸನ್ಮಾನ್ಯ ಸಭಾಪತಿಯವರು ಮತ್ತು ಮಾನ್ಯ ಜಯರಾಮಶೆಟ್ಟಿಯವರು ಎತ್ತಿದಂತಹ ವಿಚಾರದ ಬಗ್ಗೆ ಮಾನ್ಯ ಗೃಹ ಮಂತ್ರಿಗಳ ಜೊತೆಯಲ್ಲಿ ಮತ್ತು ಇದಕ್ಕೆ ಸಂಬಂಧಪಟ್ಟ ಪೊಲೀಸ್ ಅಧಿಕಾರಿಗಳ ಜೊತೆಯಲ್ಲಿ ಚರ್ಚೆ ಮಾಡಿ ಇದಕ್ಕೆ ಯಾವ ರೀತಿಯ ಪರಿಹಾರವನ್ನು ಹುಡುಕಬೇಕು ಮತ್ತು ತಾವು ಯಾವ ವಿಚಾರವನ್ನು ಹೇಳಿದ್ದೀರಿ, ಇದಕ್ಕೆ ಅನುಗುಣವಾಗಿ ಸರ್ಕಾರ ಕಾರ್ಯಕ್ರಮವನ್ನು ಕೈಗೊಳ್ಳುತ್ತದೆಂದು ಹೇಳಿ, ಇದಕ್ಕೆ ಸಂಬಂಧಪಟ್ಟಹಾಗೆ ತಮ್ಮ ಕೊಠಡಿಯಲ್ಲಿ ಕರೆದು ಬೇಕಾದರೂ ಚರ್ಚೆ ಮಾಡುವುದಕ್ಕೆ ತಯಾರಿದ್ದೇನೆನ್ನುವ ಮಾತನ್ನು ಸರ್ಕಾರದ ಪರವಾಗಿ ಹೇಳುತ್ತೇನೆ.

ಶ್ರೀ ಐ.ಎಂ.ಜಯರಾಮಶೆಟ್ಟಿ:- ಅಲ್ಲಿನ ಸಬ್ ಇನ್ಸ್‌ಪೆಕ್ಟರ್ ಕೂಡಲೇ ಟ್ರಾನ್ಸ್‌ಫರ್ ಮಾಡಿ ಪುನಃ ಅಲ್ಲಿಗೇ ಸಬ್‌ಇನ್‌ಸ್ಪೆಕ್ಟರ್ ಅನ್ನು ಪೋಸ್ಟಿಂಗ್ ಮಾಡಿದರು. ಇಲ್ಲಿ ನಾನು ತಪ್ಪು ಮಾಡಿದ್ದರೆ ನನಗೆ ಶಿಕ್ಷೆ ಕೊಡಿ, ನಾನು ನನ್ನ ಜೀವನದಲ್ಲಿ ಯಾರಿಗೂ ಅನ್ಯಾಯ ಮಾಡುವುದಕ್ಕೆ ಹೋಗಿಲ್ಲ. ಕೆಟ್ಟದ್ದು ಮಾಡುವುದಕ್ಕೆ ಹೋಗಿಲ್ಲ, ಕೆಟ್ಟ ಭಾವನೆಯನ್ನು ನಾನು ವ್ಯಕ್ತಮಾಡಿಲ್ಲ, ಆದರೆ ಇಷ್ಟು ಕೆಟ್ಟಪರಿಸ್ಥಿತಿಯಲ್ಲಿ ರಾಜಕೀಯ ಹೋದರೆ ಇದರಲ್ಲಿ ಬೇರೆ ಏನೂ ಇಲ್ಲ. ನನಗೆ ರಾಜಕಾರಣಿಗಳ, ಅಧಿಕಾರಿಗಳ ಹಸ್ತಕ್ಷೇಪವಾಗಿದ್ದು ಗೊತ್ತು. ಇವತ್ತು ಆ ರಾಜಕಾರಣಿಗಳು ಎಲ್ಲಿಗೆ ಹೋದರು, ಆ ಅಧಿಕಾರಿಗಳು ಹೇಗೆ ಇದ್ದಾರೆಂಬುದನ್ನು ನಾನು ನೋಡುತ್ತಾ ಇದ್ದೇನೆ. ಇಲ್ಲಿ ನಮಗೆ ಆಡಳಿತದಲ್ಲಿ ಯಾವ ರೀತಿಯ ನ್ಯಾಯ ಸಿಗುತ್ತಾ ಇಲ್ಲ.

ಅಧ್ಯಕ್ಷರು:- ಈಗ ತಮ್ಮಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ. ಇನ್ನು ಅರ್ಧ ಗಂಟೆಯಲ್ಲಿ ಭೋಜನಕ್ಕೆ ಹೋಗುತ್ತೇವೆ. ಆ ಸಮಯದಲ್ಲಿ ಹತ್ತು ನಿಮಿಷ ತಾವು ನನ್ನ ಕೊಠಡಿಗೆ ಬನ್ನಿ. ನಾನು ಗೃಹ ಸಚಿವರನ್ನು ಮತ್ತು ಕಾನೂನು ಮತ್ತು ಸಂಸದೀಯ ವ್ಯವಹಾರ ಸಚಿವರನ್ನು ಬರುವುದಕ್ಕೆ ಹೇಳುತ್ತೇನೆ. ಸನ್ಮಾನ್ಯ ವಿರೋಧಪಕ್ಷದ ನಾಯಕರಿಗೂ ಕರೆ ಕಳುಹಿಸುತ್ತೇನೆ. ಮಾನ್ಯ ಸಭಾಪತಿಯವರು ಬರಲಿ, ಪುನಃ ಸಭೆ ಸಮಾವೇಶಗೊಳ್ಳುವುದರೊಳಗೆ ಸಮಸ್ಯೆಗೆ ಪರಿಹಾರವನ್ನು ಕಂಡುಕೊಂಡು ಮತ್ತೆ ಸಭೆ ಸೇರೋಣ.

ಶ್ರೀ ಎಸ್.ರಾಜೇಂದ್ರನ್:- ಮಾನ್ಯ ಅಧ್ಯಕ್ಷರೇ, ಹಿಂದಿನ ಸದನದಲ್ಲಿ ತಾವು ನನಗೂ ಸಹ ಇದೇ ರೀತಿಯಾಗಿ ಹೇಳಿದ್ದಿರಿ. ಅದಕ್ಕೆ ನಾನು ಒಪ್ಪಿಕೊಂಡಿದ್ದೆನು. Twice they announced in the papers that particular Police Officer is transferred to so and so department. But again they

retained him. I kept quiet for one year. Again this year, they have announced particular Police Officer is transferred to so and so department. Again they have ratained him. If they transfer like this how can an MLA work in that Constituency? I do not mind any Police Officer. I am not depending upon them. I am not a parasite to them. My people have elected me, but the way the administration by this Government, it is a shame to me, being an MLA in the House. I am bringing to your notice to rectify this mistake. You may kindly put a word to the Government and to the Hon.Chief Minister not to do that mistake. The members are losing their power to do justice. The point is that particular Minister, particular Government is not cooperating with me.

MR.SPEAKER:- I have understood your feelings. Hon.members, Mr.Jayaram Shetty and Mr.Sabhapathy, please come to me during lunch hour. Any Mr.Roshan Baig, the Hon.Minister for Home will be meeting me. I will have this problem also sorted out. Now Mr.Suresh Kumar. We have already spent 1 hour 20 minutes during Zero hour.

(ಋ) ಬೆಂಗಳೂರಿನ ಪೋಲೀಸ್ ಕಮೀಷನರ್ ಕಛೇರಿ ಆವರಣದಲ್ಲಿ ಮರಗಳನ್ನು ಕಡಿದು ಹಾಕಿರುವುದು.

ಶ್ರೀ ಎಸ್.ಸುರೇಶ್‌ಕುಮಾರ್ (ರಾಜಾಜಿನಗರ):- ಮಾನ್ಯ ಅಧ್ಯಕ್ಷರೆ, ಇವತ್ತು ಒಂದು ಸುದ್ದಿಯನ್ನು ನೋಡಿ ಮನಸ್ಸಿಗೆ ಆಘಾತವಾಗಿ ಈ ವಿಷಯವನ್ನು ಪ್ರಸ್ತಾಪಿಸುತ್ತಿದ್ದೇನೆ. ಬೆಂಗಳೂರಿನ ಪೋಲೀಸ್ ಕಮೀಷನರ್ ಕಛೇರಿಯಲ್ಲಿ ಬೆಳೆದು ನಿಂತಿದ್ದ ಮರಗಳನ್ನು ಒಬ್ಬ ಅಧಿಕಾರಿ ತನ್ನ ಅಭಿಲಾಷೆಗೋಸ್ಕರ ಕತ್ತರಿಸಿದ್ದಾರೆ. ಇದೇ ಅಧಿಕಾರಿ ಇಂದಿರಾನಗರದ ಕ್ಲಬ್‌ನಲ್ಲಿ ಕೂಡ ಯಾರ ಪರ್ಮಿಷನ್ ತೆಗೆದುಕೊಳ್ಳದೆ ಸುಮಾರು 15 ಮರಗಳನ್ನು ಕಡಿಸಿದ್ದು, ಇವತ್ತು ಕೇಸ್ ನಡೆಯುತ್ತಿದ್ದರೂ ಕೂಡ ಬೆಂಗಳೂರು ನಗರದ ಪೋಲಿಸ್ ಆಯುಕ್ತರು in a most insensitive manner ಆ ಮರಗಳನ್ನು ಕತ್ತರಿಸಿದ್ದಾರೆ. ಇವತ್ತು ಪತ್ರಿಕೆಗಳಲ್ಲಿ ಮನವಿಗಳನ್ನು ಮಾಡಿದ್ದಾರೆ. ಇನ್ನು ಉಳಿದಂತಹ ಮರಗಳನ್ನು ಉಳಿಸಿ ಎಂದು ತಿಳಿಸಿದ್ದಾರೆ. ಪೊಲೀಸ್ ಕಮೀಷನರ್ ಆಫೀಸ್‌ನಲ್ಲಿ ಅನೇಕ